**O.S. 369-19 DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 30.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ S S S, ವಕೀಲರಿಂದಃ**

5. ಅಸಲು ದಾವೆ ನಂಃ 73/2011 ರಲ್ಲಿರುವ ದಾವಾ ಆಸ್ತಿ ಹಾಗೂ ಈ ದಾವೆ ದಾವಾ ಆಸ್ತಿ ಬೇರೆ ಬೇರೆ ಅಂದರೆ ಸರಿ. ಈಗ ಸಾಕ್ಷಿಗೆ ಅಸಲು ದಾವೆ ನಂಃ 73/11 ರ ದೃಢೀಕೃತ ವಾದ ಪತ್ರ ತೋರಿಸಲಾಗಿ, ಅದರಲ್ಲಿ ದಾವಾ ಆಸ್ತಿ ಸರ್ವೆ ನಂಃ 213/2, 5 ಎಕರೆ 13 ಗುಂಟೆ ಇದೆ ಅಂತಾ ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ.16 ಎಂದು ಗುರುತಿಸಲಾಯಿತು. ಅಸಲು ದಾವೆ ನಂಃ 73/11 ಹಾಕುವ ದಾವೆ ಕಾರಣ ಬೇರೆ. ಈ ದಾವೆಯ ದಾವಾ ಕಾರಣ ಬೇರೆ ಅಂದರೆ ಸರಿ. ವಾದಿ ದಾವೆಯಲ್ಲಿ 1/5 ಅಂಶ ಪಾಲು ಕೇಳಿ ಮೃತ್ಯು ಪತ್ರ ಹಾಗೂ ದಾನ ಪತ್ರಗಳು ಬಂಧನಕಾರಿ ಅಲ್ಲವೆಂದು ಕೇಳಿದ್ದಾರೆ ಅಂದರೆ ಸರಿ.

6. ನನ್ನ ಅತ್ತೆಯ ಮೂಲ ಊರು ನವಲಗುಂದ ತಾಲ್ಲೂಕಿನ ಬೆಳವಟಗಿ. ನನ್ನ ಅತ್ತೆ ದೇವಿಕಾ ಶಾಲೆ ಕಲಿತಿರಲಿಲ್ಲ. ನನ್ನ ಅತ್ತೆ ಬ್ಯಾಂಕಿನ ವ್ಯವಹಾರ ಮಾಡುತ್ತಿದ್ದರು ಹಾಗೂ ಸಹಿ ಕೂಡಾ ಮಾಡುತ್ತಿದ್ದರು. ಕನ್ನಡದಲ್ಲಿ ಸಹಿ ಮಾಡುತ್ತಿದ್ದರು. ನನ್ನ ಅತ್ತೆ ದೇವಿಕಾ ಇಟಗಿ ಮೂಲತಃ ಗೌಡರ ಕುಟುಂಬದವರು ಅಂದರೆ ಸರಿ. ನನ್ನ ಅತ್ತೆ ದೇವಿಕಾ ಇಟಗಿ ರವರ ತಂದೆ ಹೆಸರು ರಾಮನಗೌಡ ಪಾಟೀಲ, ತಾಯಿ ಹೆಸರು ಲಕ್ಷ್ಮೀಬಾಯಿ. ಲಕ್ಷ್ಮವ್ವ ಅಂತಾ ಕರೆಯುತ್ತಿದ್ದರು ಅಂದರೆ ಸರಿ. ನನ್ನ ಅತ್ತೆಗೆ ಮದುವೆಯಾದ 3 ಜನ ಹೆಣ್ಣು ಮಕ್ಕಳು ಜನಿಸಿದರು ಅಂದರೆ ಸರಿ. ನನ್ನ ಅತ್ತೆ ದೇವಿಕಾ ಇಟಗಿ ರವರ ತಂದೆ-ತಾಯಿ ಗಳು ಸೋಮಪ್ಪನಿಗೆ ನೌಕರಿ ಆದಾಯ ಸಾಕಾಗುವುದಿಲ್ಲ ಅಂತಾ ದೇವಿಕಾ ರವರ ಹೆಸರಿನಲ್ಲಿ ಆಸ್ತಿ ಹಚ್ಚಿದ್ದಾರೆ ಅಂದರೆ, ಪ್ರೀತಿಯಿಂದ ಹಚ್ಚಿದ್ದಾರೆ, ಆದಾಯ ಸಾಕಾಗುವುದಿಲ್ಲ ಅಂತಾ ಅಲ್ಲ. ತನ್ನ ಮಗಳು ಹಾಗೂ ಕುಟುಂಬ ಚೆನ್ನಾಗಿರಲಿ ಅಂತಾ ಆಸ್ತಿ ಹಚ್ಚಿದ್ದಾರೆ ಅಂದರೆ ಸರಿ. 1972 ರಲ್ಲಿ ಸ ನಂಃ 36/3 ಪಿ ಹಾಲಗೂ 36/3 ಎ ಗಳನ್ನು ಹಚ್ಚಿದ್ದಾರೆ ಅಂದರೆ ಸರಿ. ಸಾಕ್ಷಿಗೆ ಮುಟೇಶನ್ ನಂಃ 1028 ಓದಿ ತೋರಿಸಲಾಗಿ, ಸಾಕ್ಷಿಯೂ ಸದರಿ ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ಮುಟೇಶನ್ ಪ್ರತಿಯನ್ನು ನಿಪಿ.17 ಎಂದು ಗುರುತಿಸಲಾಯಿತು. 12 ಎಕರೆ ದೇವಿಕಾ ರ ಹೆಸರಿನಲ್ಲಿ ಹಚ್ಚಿದ್ದಾರೆ ಅಂದರೆ ಗೊತ್ತಿಲ್ಲ.

**O.S. 369-19** **DW-1**

ಸದರಿ ಜಮೀನನ್ನು ದೇವಿಕಾ ರವರು ತಮಗೆ ವೈಯಕ್ತಿಕವಾಗಿ ನಿರ್ವಹಣೆ ಮಾಡಲು ಆಗುವುದಿಲ್ಲವೆಂದು ಸೋಮಪ್ಪ ರವರಿಗೆ ಬ್ಯಾಂಕ ಸಾಲ ಹಾಗೂ ಜಮೀನು ಸಾಗುವಳಿ ಮಾಡಲು ಕೊಟ್ಟರು ಅಂದರೆ ಗೊತ್ತಿಲ್ಲ. ಆದರೆ ಪ್ರಿತೀಯಿಂದ ಕೊಟ್ಟರೆಂದು ಸ್ವತಃ ಹೇಳುತ್ತಾರೆ. ಸದರಿ ಜಮೀನನ್ನು ದೇವಿಕಾ ರವರು ಬ್ಯಾಂಕ ಸಾಲ ಹಾಗೂ ಜಮೀನನ್ನು ಸಾಗುವಳಿ ಮಾಡಲು ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಸಾಕ್ಷಿಯೂ ಮುಟೇಶನ್ ನಂಃ 1220 ನ್ನು ಓದಿ ಸದರಿ ಜಮೀನನ್ನು ಸಾಗುವಳಿ ಮಾಡಲು ಬ್ಯಾಂಕಿನಿಂದ ಸಾಲ ಪಡೆಯಲು ಅಂತಾ ಕೊಟ್ಟಿದ್ದಾರೆಂದು ಬರೆಯಲಾಗಿದೆ ಅಂದರೆ, ಓದಿ ಹೌದು ಎಂದು ಹೇಳುತ್ತಾರೆ. ಸದರಿ ಮುಟೇಶನ್ ಪ್ರತಿಯನ್ನು ನಿಪಿ.18 ಎಂದು ಗುರುತಿಸಲಾಯಿತು. ನಿಪಿ.18 ರ ಮಾಲ್ಕಿ ಬಿಟ್ಟುಕೊಟ್ಟಿಲ್ಲ ಅಂದರೆ ಗೊತ್ತಿಲ್ಲ. ನಿಪಿ.18 ನ್ನು ಸಾಕ್ಷಿ ನೋಡಿ ಮಾಲ್ಕಿ ಹಕ್ಕು ಬಿಟ್ಟುಕೊಟ್ಟಿಲ್ಲವೆಂದು ಬರೆಯಲಾಗಿದೆ ಅಂದರೆ ಸರಿ. ನಿಪಿ.18 ರ ಪ್ರಕಾರ ದೇವಿಕಾ ರವರ ಸೋಮಪ್ಪ ಮಾಲ್ಕಿ ಹಕ್ಕು ಬಿಟ್ಟುಕೊಟ್ಟಿಲ್ಲ ಅಂದರೆ ಸರಿ. ಸ ನಂಃ 36 ಸಿ, 6 ಎಕರೆ ಜಮೀನನ್ನು ದೇವಿಕಾ ರವರು ಸೋಮಪ್ಪ ರವರಿಗೆ ಹಕ್ಕು ಬಿಟ್ಟುಕೊಟ್ಟ ಪತ್ರ ಬರೆದುಕೊಟ್ಟ ಬಗ್ಗೆ ಪ್ರತಿವಾದ ಪತ್ರದಲ್ಲಿ ಹೇಳಿದಂತೆ ದಾಖಲೆಯನ್ನು ಹಾಜರಪಡಿಸಿಲ್ಲ. ಸೋಮಪ್ಪ ರವರು ದುರುಪಯೋಪಡಿಸಿಕೊಂಡು 1992 ರಲ್ಲಿ ಸ ನಂಃ 36 ಸಿ ಆಸ್ತಿಯನ್ನು ಬೇರೆಯವರಿಗೆ 1 ಲಕ್ಷ 36 ಸಾವಿರ ರೂ. ಮಾರಾಟ ಮಾಡಿದ್ದಾರೆ ಅಂದರೆ ಗೊತ್ತಿಲ್ಲ. ಸದರಿ 1 ಲಕ್ಷ 36 ಸಾವಿರ ರೂ. ಹಣವನ್ನು ಸೋಮಪ್ಪ ರವರು ಬೇರೆ ಕಡೆಗೆ ಹೂಡಿಕೆ ಮಾಡಿದ್ದಾರೆ ಅಂದರೆ ಸರಿ. ಆದರೆ ಇದೇ ಹಣದಿಂದ ಆಸ್ತಿ ಖರೀದಿ ಮಾಡಿಲ್ಲ. ಸೋಮಪ್ಪ ಹೆಂಡತಿ ಆಸ್ತಿ ಮಾರಾಟ ಮಾಡಿದ ಹಣದಿಂದ ಬೇರೆ ಆಸ್ತಿ ಖರೀದಿ ಮಾಡಿದರೆ, ಅದು ಆತನ ಸ್ವಯಾರ್ಜಿತ ಆಸ್ತಿಯಾಗುವುದಿಲ್ಲ, ಒಟ್ಟು ಕುಟುಂಬದ ಆಸ್ತಿಯಾಗುತ್ತದೆ ಅಂದರೆ ಗೊತ್ತಿಲ್ಲ. ಸೋಮಪ್ಪನಿಗೆ ದಿಃ 15.5.1981 ರಲ್ಲಿ ನಿಡಿ.21 ರ ಪ್ರಕಾರ 247/- ರೂ..ಪಿಂಚಣಿ ಇದೆ ಅಂದರೆ ಸರಿ. ಆಗಸ್ಟ 2007 ರಲ್ಲಿ ಬೇಸಿಕ್ 2411/- ರೂ. ಅಂದರೆ ಸರಿ. ಸೋಮಪ್ಪನಿಗೆ ಪಿಂಚಣಿ ಹಣದಿಂದ ಆಸ್ತಿ ಖರೀದಿ ಮಾಡಲು ಆಗುವುದಿಲ್ಲ ಅಂದರೆ ಸರಿ. ಸ್ವತಃ ಸಾಕ್ಷಿ ರಿಯಲ್ ಎಸ್ಟೇಟ್ ವ್ಯವಹಾರದಿಂದ ಮಾಡಿದ್ದಾರೆ ಎಂದು ಹೇಳುತ್ತಾರೆ. ರಿಯಲ್ ಎಸ್ಟೇಟ್ ವ್ಯವಹಾರ ಮಾಡುವ ಅಂಗಡಿ ತೆಗೆದಿರಲಿಲ್ಲ. ಬೇರೆ ವ್ಯವಹಾರ ಮಾಡುವ ಬಗ್ಗೆ ತೆರಿಗೆ ಕಟ್ಟಿಲ್ಲ. ಸೋಮಪ್ಪನಿಗೆ ಬೇರೆ ಆದಾಯದ ಮೂಲದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ನಿಡಿ.5, ದಿಃ 6.4.2017 ಸೋಮಪ್ಪ ದಾನ ಪತ್ರ ಮಾಡಿದ್ದಾರೆ ಅಂದರೆ ಸರಿ.

**O.S. 369-19 DW-1**

ದಾನ ಪತ್ರದಲ್ಲಿ ಎಲ್ಲಿಯೂ ಸ್ವಯಾರ್ಜಿತ ಆಸ್ತಿ ಎಂದು ನಮೂದು ಮಾಡಿಲ್ಲ ಅಂದರೆ ಗೊತ್ತಿಲ್ಲ. ಸ್ವಂತ ವಹಿವಾಟದಲ್ಲಿದ್ದ ಜಮೀನು ಎಂದು ಹೇಳಿದ್ದಾರೆ ಅಂದರೆ ಸರಿ. ನಾನು ದುಡಿದು ಖರೀದಿ ಮಾಡಿದ ಸ್ವಯಾರ್ಜಿತ ಹಾಗೂ ಕಬ್ಜೆ ಎಂದು ಬರೆದಿಲ್ಲ ಅಂದರೆ ಸರಿ. ನಿಡಿ.5 ರಲ್ಲಿ 4 ಜನ ಹೆಣ್ಣು ಮಕ್ಕಳ ಬಗ್ಗೆ ನಮೂದು ಇಲ್ಲ ಅಂದರೆ ಸರಿ. ದೇವಿಕಾ ರವರ ಆಸ್ತಿ ಮಾರಾಟ ಮಾ ಸೋಮಪ್ಪ ಆಸ್ತಿ ಖರೀದಿ ಮಾಡಿದ್ದರಿಂದ ಆತನಿಗೆ ಮೃತ್ಯು ಪತ್ರ ಹಾಗೂ ದಾನಪತ್ರ ಮಾಡುವ ಅಧಿಕಾರ ಇಲ್ಲ ಅಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿ ಇರುವುದರಿಂದ ಸೋಮಪ್ಪ ತನ್ನ ಸ್ವಂತ ಕಬ್ಜೆ ವಹಿವಾಟದಲ್ಲಿರುವ ಆಸ್ತಿ ಅಂತಾ ಹೇಳಿದ್ದಾರೆ ಅಂದರೆ, ಸ್ವಯಾರ್ಜಿತ ಎಂದು ಹೇಳುತ್ತಾರೆ. ದಿಃ 12.7.2019 ಸೋಮಪ್ಪ ಮರಣ ಹೊಂದಿದ್ದಾರೆ. ಸೋಮಪ್ಪ ಮೂಲ ಊರು ಕೋಟುಮಚಗಿ ಗ್ರಾಮ ಅಂದರೆ ಸರಿ. ಸೋಮಪ್ಪರವರದು ಕೋಮುಚಗಿಯಲ್ಲಿ ಪಿತ್ರಾರ್ಜಿತ ಆಸ್ತಿ ಇದೆ ಅಂದರೆ ಸರಿ. ಒಂದು ಹಳೇ ಮನೆ ಇದೆ ಅಂದರೆ ಸರಿ. ಅವರ ಅಣ್ಣ - ತಮ್ಮಂದಿರು ಎಲ್ಲರೂ ಮರಣ ಹೊಂದಿದ್ದಾರೆ ಅಂದರೆ ಸರಿ. ಅವರ ಅಣ್ಣ ತಮ್ಮಂದಿರ ಮಕ್ಕಳು ಜಮೀನಿನ ಕಬ್ಜಾದಲ್ಲಿದ್ದಾರೆ ಅಂದರೆ ಸರಿ. ಅವರು ಸಂಪರ್ಕದಲ್ಲಿದ್ದಾರೆ. ಕೋಟುಮಚಗಿಯಲ್ಲಿರುವ ಸೋಮಪ್ಪ ರವರ ಪಿತ್ರಾರ್ಜಿತ ಆಸ್ತಿಯಲ್ಲಿ ಲಾವಣಿ ರೂಪದಲ್ಲಿ ಹಣ ಕೊಡುತ್ತಾರೆ ಅಂದರೆ ಸರಿ. ಅದರ ಸರ್ವೆ ನಂಃ 349/1+2+3 ಬಿ. ಇನ್ನು ಎರಡು ಭೂಮಿ ಇವೆ ಅಂದರೆ ಸರಿ. ಅದರ ಸರ್ವೆ ನಂಬರ ಗೊತ್ತಿಲ್ಲ. ಅದು ಪಿತ್ರಾರ್ಜಿತ ಆಸ್ತಿ.

7. ದೇವಿಕಾ ಇಟಗಿ ರವರು ದಿಃ 23.11.2016 ರಂದು ಮರಣ ಹೊಂದಿದ್ದಾರೆ. ಅವರು ಪಾರ್ಶುವಾಯು ಕಾಯಿಲೆ ಯಿಂದ ಬಳಲಿ ಮರಣ ಹೊಂದಿದ್ದಾರೆ. ಅವರು ಜೀವಂತವಿದ್ದಾಗ ಆಸ್ಪತ್ರೆಗೆ ತೋರಿಸುತ್ತಿದ್ದೆವು ಅವರು ಹಾಸಿಗೆ ಹಿಡಿದಿದ್ದರು. ಮಾತನಾಡುವ ಸ್ಥಿತಿಯಲ್ಲಿರಲಿಲ್ಲ, ಸ್ವಲ್ಪ ಮಾತನಾಡುತ್ತಿದ್ದರು. ಅವರಿಗೆ ಬಲಗಡೆಗೆ ಮೊದಲು ಪಾರ್ಶುವಾಯು ಆಗಿತ್ತು. ದೇಹದ ಬಲಭಾಗದಲ್ಲಿ 2014 ರಲ್ಲಿ ಪಾರ್ಶುವಾಯು ಆಗಿತ್ತು. ಯಾವ ಕಾರಣದಿಂದ ಪಾರ್ಶುವಾಯು ಆಗಿತ್ತು ಅಂತಾ ಗೊತ್ತಿಲ್ಲ. ಪ್ರಜ್ಞೆ ಇರುತ್ತಿತ್ತು. ದಿಃ 1.2.2014 ರಂದು ದೇವಿಕಾ ರವರು ಪಲ್ಲಂಗದಿಂದ ಬಿದ್ದರು ಅಂದರೆ ಸರಿ. ಬಿದ್ದ ನಂತರ ಸಂಪೂರ್ಣ ಮಾತು ಇರಲಿಲ್ಲ ಅಂದರೆ ಸರಿ. ಈಗ ಎಸ್ ಡಿ ಎಂ ಆಸ್ಪತ್ರೆಯಲ್ಲಿ ದೇವಿಕಾ ರವರು ದಾಖಲಾದಾಗ ವೈದ್ಯರು, ದೇವಿಕಾ ರವರು ಮಾತನಾಡುವ ಸ್ಥಿತಿಯಲ್ಲಿ ಇಲ್ಲವೆಂದು, ಸಾಕ್ಷಿ ಗೆ ಡಿಸ್ಚಾರ್ಜ ಸಮ್ಮರಿಯನ್ನು ಓದಿ ಹೇಳಿದಾಗ ಸಾಕ್ಷಿಯೂ ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು ನಿಪಿ.19 ಎಂದು ಗುರುತಿಸಲಾಯಿತು.

**O.S. 369-19** **DW-1**

ಮತ್ತು ಅದೇ ದಿನ ಸ್ನಾನ ಮಾಡಿದ ಬಗ್ಗೆ ದಾಖಲೆ ತೋರಿಸಿದಾಗ ಸಾಕ್ಷಿ ಅದನ್ನು ಒಪ್ಪಿದ್ದರಿಂದ ಸದರಿ ದಾಖಲನ್ನು ನಿಪಿ.20 ಎಂದು ಗುರುತಿಸಲಾಯಿತು. ಆಸ್ಪತ್ರೆಗೆ ದಾಖಲ್ ಮಾಡಿದಾಗ ದೇವಿಕಾ ರವರು ಸುಧಾರಣೆ ಕಾಣಲಿಲ್ಲ ಅಂದರೆ ಸರಿ. ದೇವಿಕಾ ರವರಿಗೆ ಪ್ರಜ್ಞೆ ಇತ್ತು. ಉಪಹಾರ ಮಾಡುತ್ತಿದ್ದರು. ದಿಃ 5.2.2014 ರಂದು Discharge against Medical advice ಎಂದು ಬಿಡುಗಡೆ ಮಾಡಿಕೊಂಡು ಹೋದೆವು ಅಂದರೆ ಸರಿ. ಇದನ್ನು ನಿಪಿ.19 ರಲ್ಲಿ ಮಜೂದು ಮಾಡಲಾಗಿದೆ ಅಂದರೆ ಸರಿ. ಸಾಮಾನ್ಯವಾಗಿ ರೋಗಿ ಸುಧಾರಣೆಯಾಗುವ ಸಾಧ್ಯತೆ ಇಲ್ಲದಾಗ, ಡಾಕ್ಟರಸಲಹೆ ವಿರುದ್ಧ ಬಿಡುಗಡೆ ಮಾಡಿಕೊಂಡು ಹೋಗುತ್ತಾರೆ ಅಂದರೆ ಸರಿ. ಆಯುರ್ವದಿಕ್ ಚಿಕಿತ್ಸೆಗೆಂದು ಕರೆದುಕೊಂಡು ಹೋಗಿದ್ದೆವು. ಭರವಸೆ ಇಲ್ಲದಾಗ ಬೇರೆ ಕಡೆಗೆ ಚಿಕಿತ್ಸೆ ಕರೆದುಕೊಂಡು ಹೋಗಿದ್ದೆವು. ಎಷ್ಟು ದಿನ ಬದುಕುತ್ತಾರೆ ಎಂದು ಬದುಕಿಲಿ ಎಂದು ಆಯುರ್ವೇದಿಕ್ ಚಿಕಿತ್ಸೆ ಕರೆದುಕೊಂಡು ಹೋಗಿದ್ದೆವು. ಇಂತಹ ಪರಿಸ್ಥಿತಿ ಒಳಗೆಡೆಗೆ ಇರುವಷ್ಟು ದಿನ ಚೆನ್ನಾಗಿರಲಿ ಅಂತಾ ಮನೆಗೆ ಕರೆದುಕೊಂಡು ಬಂದಿದ್ದೇವೆ ಅಂದರೆ, ಹಲಗಾ ಎಂಬ ಗ್ರಾಮ ಕ್ಕೆ ಚಿಕಿತ್ಸೆಗೆ ಅಂಬುಲೆನ್ಸದಲ್ಲಿ ಕರೆದುಕೊಂಡು ಹೋಗಿದ್ದೆವು. ಇಂಗ್ಲೀಷ ಔಷಧ ದೇಹಕ್ಕೆ ಸ್ಪಂಧಿಸುವುದಿಲ್ಲ ಅಂತಾ ಹಲಗಾ ಕ್ಕೆ ಕರೆದುಕೊಂಡು ಹೋಗಿದ್ದೆವು. ಹಲಗಾದಲ್ಲಿ ಚಿಕಿತ್ಸೆಯಾದ ನಂತರ ನಾವು ಮನೆಗೆ ಕರೆದುಕೊಂಡು ಬಂದೆವು. ಮನೆಗೆ ಕರೆದುಕೊಂಡು ಬಂದ ನಂತರ ಹೆಚ್ಚಿನ ಆರೈಕೆ ಅವಶ್ಯಕತೆ ಬಿತ್ತು ಅಂದರೆ ಸರಿ. 1 ವರೆ ವರ್ಷ ನಾನೇ ಆರೈಕೆ ಮಾಡಿದ್ದೇನೆ. ನಂತರ ನರ್ಸ ನೇಮಕ ಮಾಡಿದ್ದೆವು. ನರ್ಸ ಬೆಳಿಗ್ಗೆ ಬಂದು ಮದ್ಯಾಹ್ನದ ವರೆಗೆ ಇದ್ದು ಹೋಗುತ್ತಿದ್ದಳು ಅಂದರೆ, ಬೆಃಳಗ್ಗೆ 1 ವರೆ ತಾಸ ಇರುತ್ತಿದ್ದಳು ಎಂದು ಹೇಳುತ್ತಾರೆ. ಆ ಕಾಲಕ್ಕೆ ವಾದಿ ನಂಃ 1 ಹಾಗೂ 2 ಮತ್ತು ಪ್ರತಿವಾದಿಗಳ ಹೆಣ್ಣು ಮಕ್ಕಳು ಯಾವಾಗದಾರೊಮ್ಮೆ ಒಂದೊಂದು ದಿನ ಇದ್ದು ಹೋಗುತ್ತಿದ್ದರು. ವಾದಿ ಗೀತಾ ಕುಂದಗೋಳ ಕೆಲಸ ಮಾಡುವುದರಿಂದ ಆಗಾಗ ಬಂದು ಹೋಗುತ್ತಿದ್ದಳು. 1 ನೇ ವಾದಿ ಮಂಜುಳಾ 15 ದಿನಗಳಿಗೊಮ್ಮೆ ಬಂದು ಹೋಗುತ್ತಿದ್ದಳು. ಹೆಣ್ಣು ಮಕ್ಕಳು ಸ್ಥಳೀಕರಿರುವುದರಿಂದ 1 – 2 ದಿನಗಳಿಗೊಮ್ಮೆ ಬಂದು ಬೆಳಿಗ್ಗೆ - ಸಂಜೆ ಇದ್ದು ಹೋಗುತ್ತಿದ್ದರು ಅಂದರೆ ಸರಿ. 1 ನೇ ಪ್ರತಿವಾದಿ ಮುಂಬೈ ದಿಂದ ಬಂದಾಗ 1 – 2 ದಿನ ಇದ್ದು ಹೋಗುತ್ತಿದ್ದರು. ದೇವಿಕಾ ರವರು ಒಂದೆ ಕಡೆಗೆ ಮಲಗಿಕೊಂಡಿರುವುದರಿಂದ ದೇಹದ ಮೇಲೆ ಗುಳ್ಳೆಗಳು ಆಗಿದ್ದವು ಅಂದರೆ ಸರಿಯಲ್ಲ. (Bed-source)

**O.S. 369-19** **DW-1**

(Bed-source) ಆಗಿದ್ದರೂ ಸಹ ಇಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮೊದಲು ದೇವಿಕಾ ರವರನ್ನು ವಾಟರ ಬೆಡ್ ಮೇಲೆ ಮಲಗಿಸುತ್ತಿದ್ದೆವು, ಅವರಿಗೆ ಕಫ ವಾಗಿದ್ದರಿಂದ ಸಾಮಾನ್ಯ ಬೆಡ್ ದಲ್ಲಿ ಮಲಗಿಸುತ್ತಿದ್ದೆವು. ದೇವಿಕಾ ರವರಿಗೆ ಬ್ರೇನ್ ಸ್ಟ್ರೋಕವಾಗಿದ್ದರಿಂದ ಮಾತನಾಡಲು ಆಗುತ್ತಿರಲಿಲ್ಲ ಅಂದರೆ, ಸೊನ್ನೆ ಮಾಡುತ್ತಿದ್ದರೆಂದು ಹೇಳುತ್ತಾರೆ. ಅವರು ದ್ರವ ಪದಾರ್ಥ ತೆಗೆದುಕೊಳ್ಳುತ್ತಿದ್ದರು ಅಂದರೆ ಸರಿಯಲ್ಲ. ಊಟ ಮಾಡುತ್ತಿದ್ದರು. ನಿಡಿ.3 ನ್ನು ದೇವಿಕಾ ರವರು ಮನೆಯಲ್ಲಿ ಮಾಡಿದ್ದಾರೆ ಅಂದರೆ ಸರಿ. ತೀವ್ರವಾದ ಅನಾನೂಕೂಾಲತೆ ಇದ್ದಾಗ ಮನೆಯಲ್ಲಿ ದಾಖಲೆಗಳನ್ನು ನೋಂದಾಯಿಸುತ್ತಾರೆ ಅಂದರೆ ಸರಿ. ಆರೋಗ್ಯ ಸಮಸ್ಯೆವಿದ್ದಾಗ ಹಾಗೂ ವೈದ್ಯರ ಪ್ರಮಾಣ ಪತ್ರವಿದ್ದಾಗ ನೋಂದಣಿ ಕಚೇರಿಯವರು ಮನೆಗೆ ಬಂದು, ನೋಂದಣಿ ಮಾಡಿಕೊಳ್ಳುತ್ತಾರೆ ಅಂದರೆ ಸರಿ. ಇದೆಲ್ಲಾ ಮಾಡಬೇಕಾದರೆ 5 – 6 ದಿನಗಳ ಕಾಲಾವಕಾಶ ಬೇಕಾಗುತ್ತದೆ ಅಂದರೆ ಸರಿ. ನಿಡಿ.3 ದಾನಪತ್ರವನ್ನು ನಮ್ಮ ಮಾವ ಬರೆಸಿದ್ದಾರೆ. ಆಮೇಲೆ ಅಜ್ಜಿ ಸಹಿ ಮಾಡಿದ್ದಾರೆ. ನಿಡಿ.3 ನಮ್ಮ ಮಾವ ಬರೆಸುವಾಗ ಅಜ್ಜಿಯನ್ನು ನೋಂದಣಿ ಕಚೇರಿಗೆ ಕರೆದುಕೊಂಡು ಹೋಗಿಲ್ಲ. ನಿಡಿ.3 ನ್ನು ನಮ್ಮ ಮಾವ ಬರೆಸುವಾಗ ವಕೀಲರ ಮೂಲಕ ಮಾಹಿತಿ ನೀಡಿದ್ದಾರೆ. ವಕೀಲರು ನಮ್ಮ ತವರು ಮನೆಯ ಬೈಲಹೊಂಗಲದವರು ಅಂದರೆ ಸರಿ. ದೇವಿಕಾ ಸಂಪೂರ್ಣ ಬೆಡ್ ರಿಡನ್ ಆಗಿದ್ದರೂ ಸರಿ, ಆದರೆ ಮಾನಸಿಕವಾಗಿ ಚೆನ್ನಾಗಿದ್ದರು. ಹಾಸಿಗೆ ಹಿಡಿದಾಗ ಅವರು ಶಾರೀರಕವಾಗಿ ಅಸ್ವರ್ಥರು ಅಂದರೆ ಸರಿ. ನಿಡಿ.3 ರಲ್ಲಿ ಪೇಜ್ ನಂಃ 2 ರಲ್ಲಿ ನಾನು ಶಾರಿರೀಕ ಹಾಗೂ ಮಾನಸಿಕವಾಗಿ ಸದೃಡ ಇರುವಾಗ ಈ ಹೊತ್ತಿನ ದಿವಸ ಮೇಲೆ ಬರೆದ ಕಾರ್ಪೊರೇಶನ್ ಹದ್ದಿಯಲ್ಲಿ ಕಾರ್ಪೊರೇಶನ್ ತೆರಿಗೆಗೆ ಸಂಬಂಧವಿದ್ದ ಮೇಲ್ಕಾಣಸಿದ ಆಸ್ತಿಯನ್ನು ನಿಮ್ಮೆಲ್ಲರಿಗೆ ಈ ಕೆಳಗೆ ಸಹಿ ಮಾಡಿದ ಹಿರಿಯ ಸಾಕ್ಷಿದಾರರ ಸಮಕ್ಷಮ ನನ್ನ ಪೂರ್ಣ ಅಕ್ಕಲ ಹುಷಾರಿಯಿಂದ ನಿಮಗೆ ದನಾವಾಗಿ ಕೊಟ್ಟಿರುತ್ತೇನೆ ಅಂತಾ ಬರೆಯಲಾಗಿದೆ ಅಂದರೆ ಸರಿ. ಸದರಿ ಭಾಗವನ್ನು ನಿಪಿ.21 ಎಂದು ಗುರುತಿಸಲಾಯಿತು.

**ಮುಂದಿನ ಪಾಟೀ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.